

ನಿಜ, ಈ ಪುಸ್ತಕದ ಕಥೆಗಳು ಕೃಷಿ ವಾಸ್ತವಗಳನ್ನು ಫಿಕ್ಷನ್ ಆಗಿಸಲು ಪ್ರಯತ್ನಪಟ್ಟಿರುವೆ. ಭೂಮಂತ್ರಯ್ಯ ಎಲ್ಲಾ ಕಥೆಗಳ ಒಳಗೆ ಬರುತ್ತಾನೆ. ನಿಮಗೆ ಇಲ್ಲಿನ ಕಥೆಗಳನ್ನು ಓದುತ್ತಾ ಆಡುತ್ತಾ ನಟಿಸುತ್ತಾ ಬದುಕುತ್ತಾ ಹೋದರೆ ಭೂಮಂತ್ರಯ್ಯ ಒಂದೊಂದು ಕಥೆಯಲ್ಲಿ ಒಂದೊಂದು ಜೀವವಾಗಿ ಹಾವಾಗಿ ಹೂವಾಗಿ ಗಿಡವಾಗಿ ಎರೆಹುಳವಾಗಿ ಇಲಿಯಾಗಿ ಅಳಿಲಾಗಿ ಮಳೆಯಾಗಿ ಗೆದ್ದಲಾಗಿ ಸಿದ್ಧನಾಗಿ ಮಗುವಾಗಿ ಆಗಿ ಆಗಿ ಕಾಣುತ್ತಾ ಕಾಣಿಸುತ್ತಾ ಮಾಯವಾಗಿ ನಮ್ಮೊಳಗೆ ಅಡಗುತ್ತಾನೆ. ಇಲ್ಲೆಲ್ಲಾದರೂ ಉಪದೇಶ, ನೀತಿ, ನಾಗರಿಕ ಜವಾಬ್ದಾರಿಗಳು ಓದುಗರ ಮೇಲೆ ಹೇರಿದಂತೆ ಕಂಡರೆ, ಹಾಗೆ ಹೇರುತ್ತಿರುವುದು ಮನುಷ್ಯ ಭೂಮಂತ್ರಯ್ಯನಲ್ಲ, ಜೀವಲೋಕದ ಇತರ ಜೀವಿಗಳು ಮನುಷ್ಯರ ಮೇಲೆ ಸಕಾರಣವಾಗಿ ಹೇರುತ್ತಿರುವ ಹೇರಿಕೆ ಎಂದು ತಿಳಿಯುವುದು ಒಳ್ಳೆಯದೆಂದು ನನ್ನ ನಮ್ರ ಮನವಿ.

**◆ 'ಬಾಲ್ಯ' (Childhood) ಇಲ್ಲದ ವ್ಯಕ್ತಿ ಮನುಷ್ಯನಾಗಲಾರ. ಅಂದರೆ ಮನುಷ್ಯರು ಸಣ್ಣವರಾಗಿಯೇ ಉಳಿಯುವುದು ಸಣ್ಣದಲ್ಲ, ಅದೇ ದೊಡ್ಡದು ಎಂಬ ಪ್ರತಿಪಾದನೆ ಕುರಿತು ಹೇಳುವಿರಾ?**

ಚೈಲ್ಡ್‌ಹುಡ್ ಎಲ್ಲರಿಗೂ ಇರುತ್ತದೆ. ಆದರೆ ಅದು ಯಾವುದರಿಂದ ಆಗಿರುತ್ತದೆ ಎಂಬುದು ಮುಖ್ಯ. ಅದು ಮಣ್ಣಿನಿಂದ, ನೀರಿನಿಂದ, ಗೊಬ್ಬರದಿಂದ, ಗಾಳಿ ಬೆಳಕಿನಿಂದ ಆಗಿರಬೇಕು. ಮನುಷ್ಯ ಪ್ರಜ್ಞೆಯಿಂದಲೂ ಆಗಿರಲಿ, ಬರೀ ಮನುಷ್ಯ ಪ್ರಜ್ಞೆಯಿಂದಲೇ ರೂಪುಗೊಂಡಿದ್ದರೆ ಕಷ್ಟ. ಅಷ್ಟೇ ಅಲ್ಲ, ಅದು ಅನ್ಯಾಯ. ಇನ್ನು ಮನುಷ್ಯರು ಸಣ್ಣವರಾಗಿ ಉಳಿಯುವ ಮಾತು. ಇದೇನು ಅಷ್ಟು ಸುಲಭದ ಪ್ರಕ್ರಿಯೆಯಲ್ಲ, ನಮಗೆಲ್ಲಾ ದಕ್ಕುತ್ತಿರುವ ಶಿಕ್ಷಣ ನಮ್ಮನ್ನೆಲ್ಲ ದೊಡ್ಡವರನ್ನಾಗಿ ಮಾಡಿ ಯುದ್ಧಕ್ಕೆ ಸಿದ್ಧಗೊಳಿಸುವುದರಲ್ಲಿ ಆಸಕ್ತಿ ಹೊಂದಿದೆ. ಆದರೆ, ಸಾಹಿತ್ಯ-ಕಲೆ-ಸಂಗೀತ ಇವೆಲ್ಲ ಈ ದೊಡ್ಡತನದ ರೋಗಗಳಿಗೆ ನಮಗಿನ್ನೂ ಔಷಧಿಗಳಾಗಿ ಉಳಿದಿವೆ, ಇವುಗಳನ್ನು ದೊಡ್ಡವರಾಗಲು ಒಲ್ಲದವರು